ಓ.ಎಸ್. ನಂಃ **233/2022**<br>ಪಿ.ಡಬ್ಲ್ಯೂಃ **1**

ದಿನಾಂಕ **20-02-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯರ ಪರ: ಶ್ರೀ. ಎಂ ಬಿ ಪಿ ವಕೀಲರಿಂದಃ</u>

ನನಗೆ ಈ ದಾವೆಯ ಹಾಗೂ ದಾವಾ ಆಸ್ತಿಯ ಬಗ್ಗೆ ಮಾಹಿತಿ ಇದೆ. ದಾವಾ ಆಸ್ತಿಯ ಸರ್ವೆ ನಂ.188 ಇರುತ್ತದೆ. ಸದರಿ ಸರ್ವೆ ನಂ.188 ರಲ್ಲಿ ಒಟ್ಟು 05 ಎಕರೆ 38 ಗುಂಟೆ ಜಮೀನು ಇದೆ. ಸದರಿ ಸರ್ವೆ ನಂಬರಿನಲ್ಲಿ 03 ಭಾಗಗಳು ಆಗಿದ್ದಾವೆ. ಸದರಿ 03 ಭಾಗಗಳು ತಮ್ಮಣ್ಣ, ಲಚಮಪ್ಪ, ತಿಪ್ಪಣ್ಣ ಹಾಗೂ ಬುಗ್ಗಪ್ಪ ರವರಿಗೆ ಸೇರಿರುತ್ತವೆ. ತಮ್ಮಣ್ಣ ರವರಿಗೆ 26-27 ಗುಂಟೆ ಹಾಗೂ ಲಚಮಪ್ಪ 01 ಎಕರೆ 24 ಗುಂಟೆ ಮತ್ತು ತಿಪ್ಪಣ್ಣ ಹಾಗೂ ಬುಗ್ಗಪ್ಪ ರವರಿಗೆ 27 ಗುಂಟೆ ಜಮೀನು ಸೇರಿರುತ್ತದೆ. ಸದರಿ ಎಲ್ಲರೂ ಸಹ ನಮ್ಮ ಅಣ್ಣ-ತಮ್ಮಂದಿರು ಆಗಿರುತ್ತಾರೆ. ಪ್ರತಿವಾದಿ ಸಹ ನಮ್ಮ ಅಣ್ಣ-ತಮ್ಮಂದಿರ ಪೈಕಿ ಇರುತ್ತಾರೆ.

2. ದಾವಾ ಜಮೀನು 02 ಎಕರೆ 37 ಗುಂಟೆ ಇರುತ್ತದೆ. ಸರ್ವೆ ನಂ.188 ರಲ್ಲಿ ಪ್ರತಿವಾದಿಯೂ ಸಹ 02 ಎಕರೆ 37 ಗುಂಟೆ ಜಮೀನು ಹೊಂದಿರುತ್ತಾರೆ ಎಂದರೆ ಸರಿ. ಪ್ರತಿವಾದಿಯೇ ಸದರಿ 02 ಎಕರೆ 37 ಗುಂಟೆ ಜಮೀನಿನ ಮಾಲಿಕ ಹಾಗೂ ಕಬ್ಜೆದಾರ ಆಗಿರುತ್ತಾರೆ ಎಂದರೆ ಸರಿ. ಯಾದಗಿರಿ-ಹೈದ್ರಾಬಾದ್ ಹೆದ್ದಾರಿಯಿಂದ ಪಸಪುಲ್ ಗ್ರಾಮಕ್ಕೆ ಹೋಗುವ ರಸ್ತೆಯ ಎಡಬದಿಗೆ ಅಂದರೆ ರಸ್ತೆಯ ಪಶ್ಚಿಮಕ್ಕೆ ನಮ್ಮ ಮನೆಗಳು ಬರುತ್ತವೆ ಎಂದರೆ ಸರಿ. ಸದರಿ ಗ್ರಾಮದ ರಸ್ತೆ ಉತ್ತರದಿಂದ ದಕ್ಷಿಣಾಭಿಮುಖವಾಗಿರುತ್ತದೆ ಎಂದರೆ ಸರಿ. ಯಾದಗಿರಿ-ಹೈದ್ರಾಬಾದ್ ಹೆದ್ದಾರಿಯಿಂದ ಪಸಪುಲ್ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಮೊದಲು ಹಳ್ಳ ಅದಾದ ನಂತರ ನಮ್ಮ ಜಮೀನುಗಳು ಬರುತ್ತವೆ ಎಂದರೆ ಸರಿ. ಯಾದಗಿರಿ-ಹೈದ್ರಾಬಾದ್ ಹೆದ್ದಾರಿಯಿಂದ ಪಸಪುಲ್ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಪಸಪುಲ್ ಗ್ರಾಮದ ಕಡೆಗೆ ಮುಖಮಾಡಿ ನಿಂತಾಗ ಎಡಬದಿಗೆ ನಿಮ್ಮ ಜಮೀನು ಹಾಗೂ ಮನೆ ಬರುತ್ತವೆ ಎಂದರೆ ಸಾಕ್ಷಿಯು ಎಡಬದಿ ಹಾಗೂ ಬಲಬದಿ ಎರಡೂ ಕಡೆಗೆ ನಮ್ಮ ಜಮೀನು ಇದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಒಂದು ಪೋಟೋವನ್ನು ತೋರಿಸಿ ಅದರಲ್ಲಿ ಮರಗಳ ಹಿಂದೆ ಬಿಳಿ ಗೊಡೆಯ ಮನೆಯಿದ್ದು ಅದು ನಿಮ್ಮ ಮನೆ ಆಗಿರುತ್ತದೆ ಎಂದರೆ ಸಾಕ್ಷಿ ಸರಿ ಎಂದು ನುಡಿಯುತ್ತಾರೆ. ಸದರಿ ಪೋಟೊವನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ನಮ್ಮ ಮನೆಯ ಮುಂಭಾಗದಲ್ಲಿ ಪಸಪುಲ್ ಗ್ರಾಮದಿಂದ ಹೈದ್ರಾಬಾದ್ ಹೆದ್ದಾರಿಗೆ

ಹೋಗುವ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ನಮ್ಮ ಮನೆಯಿಂದ ಸೂರ್ಯ ಹುಟ್ಟುವ ಕಡೆಗೆ ಅಂದರೆ ಪೂರ್ವಕ್ಕೆ ಸದರಿ ರಸ್ತೆ ಇರುತ್ತದೆ. ನಿಮ್ಮ ದಾವಾ ಜಮೀನಿನ ಪೂರ್ವಕ್ಕೆ ರಸ್ತೆ ಇದ್ದರೂ ಸಹ ವಾದ ಪತ್ರದಲ್ಲಿ ಪೂರ್ವಕ್ಕೆ ಲಚಮಪ್ಪ ರವರ ಜಮೀನು ಇದೆ ಎಂದು ಸುಳ್ಳು ಬರೆಸಿದ್ದೀರಿ ಎಂದರೆ ಸಾಕ್ಷಿ ದಾವಾ ಜಮೀನಿನ ನಡುವೆಯೇ ರಸ್ತೆ ಹಾದು ಹೋಗಿದೆ, ನಮ್ಮ ಜಮೀನಿನ ಪೂರ್ವಕ್ಕೆ ಲಚಮಪ್ಪ ರವರ ಜಮೀನು ಇದೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯಲ್ಲಿ ಉತ್ತರಕ್ಕೆ ಅಂದರೆ ಪಸಪುಲ್ ಗ್ರಾಮದ ಕಡೆಗೆ ಮುಖಮಾಡಿ ನಿಂತಾಗ ಬಲಬದಿಗೆ ಪ್ರತಿವಾದಿಯ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ದಾವಾ ಜಮೀನಿನ ಉತ್ತರಕ್ಕೆ ತಿಪ್ಪಣ್ಣ ರವರ ಜಮೀನು ಇದೆ.

3. ದಾವಾ ಜಮೀನಿನಲ್ಲಿ ಈಗ 12-13 ವರ್ಷಗಳ ಹಿಂದೆ ಮನೆ ಕಟ್ಟಿದ್ದೇವೆ. ನಿಮ್ಮ ಜಮೀನಿಗೆ ಹೊಂದಿಕೊಂಡು ಉತ್ತರಕ್ಕೆ ಪ್ರತಿವಾದಿ ಕಾಶಪ್ಪ ರವರ ಜಮೀನು ಇದೆ ಎಂದರೆ ಸಾಕ್ಷಿ ಸರಿ, ಒಂದು ಮೂಲೆಯಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ದಾವಾ ಜಮೀನಿನ ದಕ್ಷಿಣಕ್ಕೆ ಹಳ್ಳ ಇದೆ. ದಕ್ಷಿಣಕ್ಕೆ ಲಕ್ಷ್ಮಣ ರವರ ಜಮೀನು ಹಾಗೂ ಅದಾದ ನಂತರ ಹಳ್ಳ ಬರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ಫಾರ್ಮ ನಂ.10 ನ್ನು ಮಾಡಿಸಿಕೊಂಡಿದ್ದರು ಎಂದರೆ ಸರಿ. ನಾವು ಆ ನಂತರ ಮೇಲ್ಮನವಿ ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ನಿಮ್ಮ ವಿರುದ್ಧ ಆದೇಶವಾಗಿದೆ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡದೇ ಸುಮ್ಮನೆ ನಿಂತಿರುತ್ತಾರೆ. ಸದರಿ ಮೇಲ್ಮನವಿ ದಿನಾಂಕ 03.10.2024 ರಂದು ವಜಾ ಆಗಿದೆ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡದೇ ಸುಮ್ಮನೆ ನಿಂತಿರುತ್ತಾರೆ. ದಾವಾ ಜಮೀನಿನ ಪೂರ್ವಕ್ಕೆ ರಸ್ತೆ ಇರುವುದಾಗಿ ಸದರಿ ಆದೇಶದಲ್ಲಿ ನಮೂದಿಸಿರುತ್ತಾರೆ ಎಂದರೆ ಸಾಕ್ಷಿ ತಪ್ಪಾಗಿ ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾವು ಸದರಿ ಆದೇಶ ಪುನರ್ ಪರಿಶೀಲನೆಗಾಗಿ ಅರ್ಜಿ ಸಲ್ಲಿಸಿದ್ದೆವು. ಸದರಿ ಅರ್ಜಿಯ ಪ್ರತಿಯನ್ನು ನಾನು ಹಾಜರು ಮಾಡಿಲ್ಲ. ಸದರಿ JDLR ರವರ ಆದೇಶ ಸರಿಯಾಗಿರಿರುವುದರಿಂದ ನಾವು ಆ ರೀತಿ ಪುನರ್ ಪರಿಶೀಲನೆಗಾಗಿ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

4. ಪ್ರತಿವಾದಿಯ 02 ಎಕರೆ 37 ಗುಂಟೆ ಜಮೀನಿನ ಪೂರ್ವಕ್ಕೆ ಜಲ್ಲಪ್ಪ ರವರ ಜಮೀನು ಇದೆ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ. ಉತ್ತರಕ್ಕೆ ಸಾಬಣ್ಣ ತಂದೆ ಮರೆಪ್ಪ ರವರ ಜಮೀನು ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ ನಾಲ ಇರುತ್ತದೆ ಎಂದರೆ ಸರಿ. ಪ್ರತಿವಾದಿಯ

ಜಮೀನಿನ ಪಶ್ಚಿಮಕ್ಕೆ ರಸ್ತೆ ಇದ್ದರೂ ಸಹ ನಾನು ಇಲ್ಲ ಎಂದು ಸುಳ್ಳು ಸಾಕ್ಷ ನುಡಿಯುತಿತದ್ದೇನೆಂದರೆ ಸರಿಯಲ್ಲ. ನಿಮ್ಮದು ಒಂದೇ ತುಂಡು ಜಮೀನು ಆಗಿರುತ್ತದೆ ಎಂದರೆ ಸಾಕ್ಷಿ ಸರಿಯಲ್ಲ, ಎರಡು ತುಂಡು ಇರುತ್ತದೆ ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ದಾವಾ ಜಮೀನು ಎರಡು ತುಕಡಿ ಇರುತ್ತದೆ ಎಂದು ಬರೇಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಎರಡು ತುಕಡಿಗಳ ವಿಸ್ತೀರ್ಣ ಗೊತ್ತಿದೆಯೇ ಎಂದರೆ ಸಾಕ್ಷಿ ಒಟ್ಟು 02 ಎಕರೆ 37 ಗುಂಟೆ ಇದ್ದು ಅದರಲ್ಲಿ ಈಗ 50 ವರ್ಷಗಳ ಹಿಂದೆ ರಸ್ತೆ ಹಾದು ಹೋಗಿದ್ದರಿಂದ ಎರಡು ತುಕಡಿ ಆಗಿದೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯ ಅಕ್ಕ-ಪಕ್ಕದಲ್ಲಿ ಇರುವ ಎರಡು ತುಕಡಿಗಳ ಪ್ರತ್ಯೇಕ ವಿಸ್ತೀರ್ಣವನ್ನು ವಾದ ಪತ್ರದಲ್ಲಿ ಬರೆಸಿಲ್ಲ. ಒಂದೇ ತುಂಡು ಭೂಮಿ ಇರುವುದರಿಂದ ಸದರಿ ವಿವರವನ್ನು ವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನು ಒಂದೇ ತುಂಡು ಭೂಮಿ ಆಗಿರುತ್ತದೆ ಎಂದರೆ ಸರಿ. ನಾವು ಪ್ರತಿವಾದಿಗೆ ವಿನಾಕಾರಣ ತೊಂದರೆ ಕೊಡಲು ಈ ದಾವೆ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ.

5. ಪ್ರತಿವಾದಿ ಹೆಂಡತಿ-ಮಕ್ಕಳೊಂದಿಗೆ ಮುಂಬೈಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ನಾವು ಗ್ರಾಮದಲ್ಲಿ ಇದ್ದು ಪ್ರತಿವಾದಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ ಫಾರ್ಮ ನಂ.10 ನ್ನು ತಯಾರಿಸಲು ಅರ್ಜಿ ನೀಡಿದ್ದರು ಎಂದರೆ ಸರಿ. ಅರ್ಜಿಯ ಪ್ರಕಾರ ಉಭಯ ಪಕ್ಷಗಾರರಿಗೆ ನೋಟಿಸ್ ನೀಡಿ ಫಾರ್ಮ ನಂ.10 ನ್ನು ತಯಾರಿಸಿದ್ದರು ಎಂದರೆ ಸರಿ. ನಿಮ್ಮ ಜಮೀನಿನ ಪೂರ್ವಕ್ಕೆ ಹಾಗೂ ಪ್ರತಿವಾದಿಯ ಜಮೀನಿನ ಪಶ್ಚಿಮಕ್ಕೆ ರಸ್ತೆ ಇದೆ ಎಂದು ತೋರಿಸಿರುತ್ತಾರೆ ಎಂದರೆ ಸಾಕ್ಷಿ ರಸ್ತೆಗೆ ಹೊಂದಿಕೊಂಡು ಪ್ರತಿವಾದಿಯ ಜಮೀನು ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ನಷ್ಟ ಉಂಟು ಮಾಡಲು ರಸ್ತೆಯ ಎರಡು ಬದಿಗೆ ನಮ್ಮ ಜಮೀನು ಇದೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ